ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 26-12-1978.

# *ಇಷ್ಟದೇವತೆಗಳ ಚಿಹ್ನೆಗಳು.*

( इष्ट देव की विशेषताएँ)

**ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ಪವಿತ್ರ ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

**ಸದಾ ಪರಮಪೂಜ್ಯನು ಮತ್ತು ಆತ್ಮರನ್ನು ಪೂಜಾರಿಯಿಂದ ಪೂಜ್ಯ ದೇವತೆಯಾಗಿ ತಯಾರು ಮಾಡುವ ಶಿವ ತಂದೆ ಮಾತನಾಡುತ್ತಿದ್ದಾರೆ.**

ಬಾಪ್‌ದಾದಾ ಇಂದು ಪ್ರತಿಯೊಬ್ಬ ಮಕ್ಕಳಲ್ಲಿ ಒಂದೇ ಸಮಯದಲ್ಲಿ ನಾಲ್ಕೂ ರೂಪಗಳ ವಂಶವನ್ನು ನೋಡುತ್ತಾ ಇದ್ದಾರೆ. ಮೊದಲು ಪ್ರತಿಯೊಬ್ಬರೂ ಶಿವವಂಶಿ, ಎರಡನೆಯದು ಬ್ರಹ್ಮವಂಶಿ, ಮೂರನೆಯದು ದೇವತಾವಂಶಿ, ನಾಲ್ಕನೆಯದಾಗಿ ಇಷ್ಟದೇವ ವಂಶಿಯರಾಗಿದ್ದೀರಿ. ಪ್ರತಿಯೊಬ್ಬರ ನಾಲ್ಕೂ ವಂಶದ ರೂಪವು ಬಾಪ್‌ದಾದಾರವರ ಮುಂದೆ ಸ್ಪಷ್ಟವಾಗಿ ಇದೆ. ಭಕ್ತಿ ಮಾರ್ಗದಲ್ಲಿ ಶ್ರೇಷ್ಠ ಆತ್ಮರಾದ ನೀವೇ ಭಿನ್ನ ಭಿನ್ನ ರೂಪದಲ್ಲಿ ಭಕ್ತರ ಇಷ್ಟದೇವತೆಯರಾಗುತ್ತೀರಿ. ಈಗಲೂ ನಿಮ್ಮನ್ನು ಅಥವಾ ಇಷ್ಟ ದೇವಿಗಳನ್ನು ಪ್ರಾರ್ಥಿಸುತ್ತಿರುತ್ತಾರೆ. ಹೇಗೇಗೆ ಪ್ರತ್ಯಕ್ಷತೆಯ ಸಮಯವು ಸಮೀಪ ಹಾಗೂ ಸ್ಪಷ್ಟ ಬರುತ್ತಾ ಹೋಗುತ್ತದೆಯೋ ಹಾಗೆಯೇ ನಿಮ್ಮೆಲ್ಲರ ದೇವ-ವಂಶ ಎಂದರೆ ರಾಜವಂಶ ಹಾಗೂ ಇಷ್ಟವಂಶ ಪ್ರತ್ಯಕ್ಷವಾಗುತ್ತಿರುತ್ತದೆ. ನಾವೇ ಇಷ್ಟ ದೇವತೆಯಾಗಿ ಅನೇಕ ಭಕ್ತಾತ್ಮರ ಮನೋಕಾಮನೆಗಳನ್ನು ಪೂರ್ಣ ಮಾಡಬೇಕು ಎಂಬ ಅನುಭವ ಮಾಡಿಕೊಳ್ಳುತ್ತೀರಿ. ಹೇಗೆ ರಾಜವಂಶದಲ್ಲಿ ಅನುಕ್ರಮ(ನಂಬರ್ ವಾರ್) ಇದೆಯೋ ಹಾಗೆಯೇ ಪೂಜ್ಯರೂಪದಲ್ಲಿಯೂ ಸಹ ಅನುಕ್ರಮವಾಗಿ ಇಷ್ಟದೇವತೆಗಳಾಗುತ್ತೀರಿ. ನಾನು ಯಾವ ಇಷ್ಟದೇವತೆ ಆಗಿದ್ದೇನೆ ಎನ್ನುವುದು ನೆನಪಿದೆಯೇ? ಯಾವ ದೇವಿಯ ರೂಪದಲ್ಲಿ ನಿಮ್ಮ ಪೂಜೆಯು ನಡೆಯುತ್ತಾ ಇದೆ? ನಿಮ್ಮ ಭಕ್ತಮಾಲೆಯನ್ನು ಅರಿತುಕೊಂಡಿದ್ದೀರಾ? ಯಾರು ಈಗಿನ ಸೇವೆಯಲ್ಲಿ ಸಹಯೋಗಿ ಯಾಗುತ್ತಾರೆಯೋ ಅವರಲ್ಲಿ ಕೆಲವರು ರಾಜವಂಶದಲ್ಲಿ ಬರುತ್ತಾರೆ. ಇನ್ನೂ ಕೆಲವರು ಪ್ರಜೆಗಳಲ್ಲಿ ಬರುತ್ತಾರೆ. ಅರ್ಥಾಥ್ ಈ ಸಮಯದಲ್ಲಿ ಸೇವಾ ಸಹಯೋಗಿಗಳು ಮತ್ತು ಸಮೀಪಸಹಯೋಗಿಗಳು, ಭವಿಷ್ಯದಲ್ಲಿ ಉನ್ನತ ಕುಟುಂಬೀಕರು ಮತ್ತು ಪ್ರಜೆಗಳು ಮತ್ತು ಭಕ್ತಿಯಲ್ಲಿ ಇಷ್ಟವಂಶಿಯರು ಮತ್ತು ಭಕ್ತರು ಆಗುತ್ತಾರೆ. ಇಷ್ಟದೇವ

ವಂಶಾವಳಿಯನ್ನು ಕೂಡ ತೋರಿಸುತ್ತಾರೆ ನಾವು ರಾಜವಂಶೀಯರಿಂದ ಇಷ್ಟವಂಶಿಯರು ಆಗಿದ್ದೇವೆಯೇ? ಎಂದು ಸ್ವಯಂನ್ನು ಕೇಳಿಕೊಳ್ಳಿ. ಯಾವ ನಂಬರಿನ ಇಷ್ಟದೇವತೆ ಆಗಿದ್ದೀರಿ? ಕೆಲ ಇಷ್ಟದೇವತೆಯರ ಪೂಜೆಯು ಪ್ರತಿದಿನ ನಡೆಯುತ್ತದೆ. ಕೆಲವರ ಪೂಜೆಯು ಒಮ್ಮೊಮ್ಮೆ ನಡೆಯುತ್ತದೆ. ಕೆಲವರ ಪೂಜೆಯು ನಿಯಮಾನುಸಾರವಾಗಿ, ಯುಕ್ತಿಯುಕ್ತವಾಗಿ ನಡೆಯುತ್ತದೆ. ಒಬ್ಬೊಬ್ಬರ ಪೂಜೆಯು ಯಾವಾಗಬೇಕೆಂದರೆ ಹಾಗೂ ಹೇಗೆಬೇಕೆಂದರೆ ಹಾಗೆ ನಡೆಯುತ್ತದೆ. ಒಂದೊಂದು ಇಷ್ಟದೇವತೆಯ ಪೂಜೆಯು ತುಂಬಾ ಸಂಭ್ರಮದಿಂದ ವಿವಿಧ ವೈಭವಗಳಿಂದ ನಡೆಯುತ್ತದೆ. ಮತ್ತೆ ಕೆಲವರ ಪೂಜೆಯು ಆಗಾಗ ಸಂಭ್ರಮದಿಂದ ನಡೆಯುತ್ತದೆ. ಒಂದೊಂದು ಇಷ್ಟದೇವತೆಯ ಭಕ್ತಮಾಲೆಯು ಬಹಳ ದೊಡ್ಡದಾಗಿರುತ್ತದೆ. ಎಣಿಕೆ ಇಲ್ಲದಷ್ಟು ಭಕ್ತರ ಮಾಲೆ ಇರುತ್ತದೆ. ಮತ್ತೆ ಕೆಲ ಇಷ್ಟದೇವತೆಯ ಭಕ್ತರು ತುಂಬಾ ಅಲ್ಪ ಸಂಖ್ಯೆಯವರು ಇರುತ್ತಾರೆ. ಆದರೆ ಬ್ರಾಹ್ಮಣವಂಶಿಯರೇ ರಾಜವಂಶಿಯರು, ಸಣ್ಣ ಅಥವಾ ದೊಡ್ಡ ಇಷ್ಟದೇವ ಅಥವಾ ಇಷ್ಟದೇವಿ ಅವಶ್ಯವಾಗಿ ಆಗುತ್ತೀರಿ. ಆದ್ದರಿಂದ ನೀವೆಲ್ಲರೂ ಭಕ್ತರ ಇಷ್ಟದೇವತೆ.

ಬಾಪ್‌ದಾದಾ ಇಂದು ಎಲ್ಲರನ್ನೂ ಇಷ್ಟದೇವ ಅಥವಾ ಇಷ್ಟದೇವಿಯ ರೂಪದಲ್ಲಿ ನೋಡುತ್ತಾ ಇದ್ದಾರೆ. ನನ್ನ ಮಕ್ಕಳು ಎಷ್ಟು ಪೂಜ್ಯರಾಗಿದ್ದೀರಿ ಎನ್ನುವುದನ್ನು ನೋಡುತ್ತಿದ್ದೇವೆ. ನಿಮ್ಮ ಪೂಜ್ಯ ಸ್ವರೂಪವನ್ನೂ ಸಹ ಸದಾ ಮುಂದೆ ಇಟ್ಟುಕೊಳ್ಳಿರಿ. ಶ್ರೇಷ್ಠ ಇಷ್ಟದೇವ ಆಗುವವರ ವಿಶೇಷವಾದ ಎಂಟು ವಿಶೇಷತೆಗಳನ್ನು ಸ್ಮೃತಿಯಲ್ಲಿಡಿ. ಹೇಗೆ ಅಷ್ಟ ಶಕ್ತಿಗಳು ಸ್ಮೃತಿ ಇರುತ್ತದೆಯೋ ಹಾಗೆಯೇ ಇಷ್ಟರಾಗಲು ಎಂಟು ವಿಶೇಷತೆಗಳು ಇರಬೇಕು. ಅವುಗಳನ್ನು ಚೆನ್ನಾಗಿ ತಿಳಿದುಕೊಂಡಿದ್ದೀರಲ್ಲವೇ, ನಿಮ್ಮ ಜ್ಞಾಪಕಾರ್ಥ ಚಿತ್ರಗಳನ್ನು ನೋಡುವುದರಿಂದಲೂ ಆ ವಿಶೇಷತೆಗಳು ಅನುಭವ ಆಗುವುವು.

ಮೊದಲನೆಯ ವಿಶೇಷತೆ: ಇಷ್ಟದೇವತೆಯು ಸದಾ ದಯಾಹೃದಯಿರಾಗಿರುವರು. ಯಾವ ದಯೆ? ಪ್ರತಿಯೊಂದು ಆತ್ಮವನ್ನೂ ಅಲೆದಾಟ ಅಥವಾ ಬಿಕಾರಿತನದಿಂದ ಉಳಿಸುವ ದಯೆಯನ್ನು ಪ್ರತಿಯೊಬ್ಬರ ಮೇಲೂ ತೋರಿಸುವರು. ನಿಷ್ಕಾಮ ದಯಾಹೃದಯಿಯಾಗಿರುವರು. ಒಬ್ಬೊಬ್ಬರ ಮೇಲೆ ದಯೆ ತೋರಿಸುವುದು, ಒಬ್ಬೊಬ್ಬರ ಮೇಲೆ ದಯೆ ತೋರಿಸದೆ ಇರುವುದು ಹೀಗೆ ಮಾಡುವುದಿಲ್ಲ. ಎಂದರೆ ಮಿತಿ(ಹದ್ದು) ಇಲ್ಲದ ರೂಪದಲ್ಲಿ ದಯಾಹೃದಯಿಯಾಗಿರುವರು. ಅವರ ದಯೆಯ ಸಂಕಲ್ಪದಿಂದ ಅನ್ಯ ಆತ್ಮರಿಗೆ ತಮ್ಮ ಆತ್ಮಿಕರೂಪ ಅಥವಾ ಆತ್ಮದ ಗುರಿಯು ಒಂದು ಸೆಕೆಂಡ್‌ನಲ್ಲಿ ಸ್ಮೃತಿಯಲ್ಲಿ ಬಂದು ಬಿಡುವುದು. ಅವರ ದಯೆಯ ಸಂಕಲ್ಪದಿಂದ ನಿರ್ಗತಿಕರಿಗೆ ಸರ್ವ ಖಜಾನೆಗಳ ಹೊಳಪು ಕಾಣಿಸುತ್ತದೆ. ಅಲೆದಾಡುತ್ತಿರುವ ಆತ್ಮರಿಗೆ ಮುಕ್ತಿ ಅಥವಾ ಜೀವನ್ಮುಕ್ತಿಯ ದಡ ಅಥವಾ ಗುರಿಯು ಎದುರಿನಲ್ಲಿ ಕಂಡುಬರುವುದು. ಇಂತಹ ದಯಾಹೃದಯಿ ಆಗಿರುವರು.

ಎರಡನೆಯ ವಿಶೇಷತೆ: ಇಷ್ಟದೇವ ಆತ್ಮವು ಸದಾ ಸರ್ವರ ದುಃಖಹರ್ತ ಸುಖಕರ್ತನ ಪಾತ್ರವನ್ನು ಅಭಿನಯಿಸುವುದು. ಇನ್ನೊಬ್ಬರ ದುಃಖವನ್ನು ತಮ್ಮ ದುಃಖದ ಸಮಾನವೆಂದು ತಿಳಿಕೊಂಡು, ಸಹನೆ ಮಾಡಲಾರರು ದುಃಖವನ್ನು ಮರೆಸುವ ಅಥವಾ ದುಃಖಿತರನ್ನು ಸುಖಿಯನ್ನಾಗಿ ಮಾಡುವ ಯುಕ್ತಿ ಅಥವಾ ಸಾಧನವು ಸದಾ ಅವರಬಳಿ ಮಂತ್ರಗಾರಿಕೆಯ ಬೀಗದ ಕೈನ ಹಾಗೆ ಇರುವುದು.

ಮೂರನೆಯ ವಿಶೇಷತೆ : ಸದಾ ಸಂಕಲ್ಪ, ನುಡಿ ಹಾಗೂ ಕರ್ಮದಿಂದ ಪವಿತ್ರತೆಯ ವ್ಯಕ್ತಿತ್ವವು ಗೋಚರವಾಗುವುದು.

ನಾಲ್ಕನೆಯ ವಿಶೇಷತೆ : ಸದಾ ಸ್ವಭಾವದಲ್ಲಿ, ಸಂಸ್ಕಾರದಲ್ಲಿ ನಡವಳಿಕೆಯಲ್ಲಿ ಸರಳ ಆದರೆ ಶ್ರೇಷ್ಠ ಆಗಿರುವಂತೆ ಕಂಡುಬರುವುದು.

ಐದನೆಯ ವಿಶೇಷತೆ : ಹೇಗೆ ನಿಮ್ಮ ಜಡಚಿತ್ರವು ಸದಾ ಸಿಂಗರಿಸಲ್ಪಟ್ಟಿರುವಂತೆ(ಶೃಂಗಾರ) ತೋರಿಸಲಾಗಿದೆಯೋ ಹಾಗೆಯೇ ಸರ್ವಗುಣಗಳ ಶೃಂಗಾರದಿಂದ ಸದಾ ಅಲಂಕೃತರಾಗಿರುವಂತೆ ಕಂಡು ಬರುವರು. ಯಾವ ಒಂದು ಗುಣರೂಪಿ ಶೃಂಗಾರವೂ ಸಹ ಕಡಿಮೆ ಆಗಿರುವುದಿಲ್ಲ.

ಆರನೆಯ ವಿಶೇಷತೆ : ಅಂತಹ ಇಷ್ಟ ದೇವತೆಯ ಚಹರೆಯು ಸದಾ ಸ್ವಯಂ ತಾನೂ ಸಹ ಕಮಲ ಸಮಾನ ಆಗಿರುವುದು ಹಾಗೂ ಇತರರನ್ನೂ ಸಹ ಕಮಲಪುಷ್ಪದ ಸಮಾನ ಅತೀತ ಹಾಗೂ ಪ್ರೀತಿಪಾತ್ರನನ್ನಾಗಿ ಮಾಡಿಬಿಡುವುದು.

ಏಳನೆಯ ವಿಶೇಷತೆ : ಅಂತಹ ಇಷ್ಟ ಆತ್ಮವು ಸದಾ ಸ್ಥಿತಿಯಲ್ಲಿ ಆಚಲ, ಆಡೋಲ ಆಗಿರುವುದು. ಹೇಗೆ ಮೂರ್ತಿಯನ್ನು ಸ್ಥಾಪನೆ ಮಾಡುತ್ತಾರೋ ಹಾಗೆ ಆ ಚೈತನ್ಯ ಮೂರ್ತಿಯು ಸದಾ ಏಕರಸ ಸ್ಥಿತಿಯಲ್ಲಿ ಸ್ಥಿತವಾಗಿರುವುದು.

ಎಂಟನೆಯ ವಿಶೇಷತೆ : ಸದಾ ಸರ್ವರ ಬಗ್ಗೆ ಸಂಕಲ್ಪ ಹಾಗೂ ಮಾತಿನಲ್ಲಿ ವರದಾನಿ ಆಗಿರುವುದು. ನಿಂದೆ ಅಥವಾ ದೂಷಣೆ ಮಾಡುವವರ ಮೇಲೂ ವರದಾನಿ ಆಗಿರುವರು. **ನಿಂದೆ ಮಾಡುವವರ ಬಗ್ಗೆಯೂ ಓಹೋ-ಓಹೋ ಎನ್ನುವ ಪುಷ್ಪಗಳ ಮಳೆಯನ್ನು ಕರೆಯುವವರಾಗಿರುವರು. ಇದರ ಪ್ರತಿಯಾಗಿ ಇಷ್ಟದೇವರೂಪದಲ್ಲಿ ಅವರಿಗೆ ಪುಷ್ಪಗಳ ಮಳೆಯು ಹೆಚ್ಚಿಗೆ ದೊರೆಯುತ್ತದೆ. ಮಹಿಮೆ ಮಾಡುವವರ ಮಹಿಮೆ(ಸ್ತುತಿ) ಮಾಡುವುದು ಸರ್ವೇಸಾಮಾನ್ಯವಾದ ನಡವಳಿಕೆ. ಅದರೆ ನಿಂದೆ ಮಾಡುವವರ ಕೊರಳಿನಲ್ಲಿಯೂ ಸಹ ಗುಣಗಳ ಮಾಲೆಯನ್ನು ಹಾಕುವುದು ಜನ್ಮ ಜನ್ಮಾಂತರದವರೆಗೆ ಅವರನ್ನು ಭಕ್ತರನ್ನಾಗಿ ನಿಶ್ಚಿತ ಮಾಡುವುದಾಗಿದೆ. ಜೊತೆ-ಜೊತೆಗೆ ವರ್ತಮಾನ ಸಮಯದಲ್ಲಿ ಸದಾ ಸಹಯೋಗಿ ಮಾಡುವುದೂ ನಿಶ್ಚಿತವಾಗುತ್ತದೆ.**

ಹೇಗಾದರೆ ಈಗಿನ ದಿನಗಳಲ್ಲಿ ವಿಶೇಷಾತ್ಮರನ್ನು ಸ್ವಾಗತ ಮಾಡುವಾಗ ಕೊರಳಲ್ಲಿ ಸ್ಥೂಲ ಮಾಲೆ ಹಾಕುತ್ತಾರೆ ಮತ್ತೆ ನೀವು ಏನು ಮಾಡುತ್ತಿರುವಿರಿ? ಹಾಕಿದವರಿಗೆ ಹಿಂತಿರುಗಿ ಮಾಲೆ ಹಾಕುತ್ತಾರೆ ತಾನೆ! ಹಾಗೆಯೇ ನಿಂದಿಸುವವರಿಗೆ ಕೂಡ ನೀವು ಗುಣಮಾಲೆಯನ್ನು ಹಾಕಿರಿ. ಆಗ ಅವರು ಸ್ವತಹವಾಗಿ ನಿಮ್ಮ ಗುಣಮಾಲೆ ಅವರು ನಿಮಗೇ ಹಿಂತಿರುಗಿ ಹಾಕುತ್ತಾರೆ. ಹೇಗಾದರೆ ನೀವು ತಂದೆಯ ಪ್ರತಿ ಹೆಜ್ಜೆ, ಪ್ರತಿ ಕರ್ಮದ ಗುಣಗಾನ ಮಾಡುತ್ತಿದ್ದೀರೋ ಹಾಗೆಯೇ ಇಷ್ಟ ದೇವತೆ ಮತ್ತು ಮಹಾನ್ ಆತ್ಮರಾದ ನಿಮ್ಮ ಗುಣಗಳು ಸದಾಗಾನ ಮಾಡುತ್ತಾ ಇರುತ್ತಾರೆ. ಆದ್ದರಿಂದ ಕೊಡುವುದು ಎಂದರೆ ಅನೇಕ ಬಾರಿ ತೆಗೆದುಕೊಳ್ಳುವುದೇ ಆಗುತ್ತದೆ. ಈಗ ಎಲ್ಲರೂ ನಿಮ್ಮ ಇಷ್ಟದೇವತೆಯ ಸ್ವರೂಪವು ಎಷ್ಟರಮಟ್ಟಿಗೆ ತಯಾರಾಗಿದೆ ಎಂದು ನಿಮ್ಮನ್ನು ನೀವೇ ಪರಿಶೀಲಿಸಿಕೊಳ್ಳಿರಿ. ಯಾವಾಗ ಮೂರ್ತಿಯು ತಯಾರಾಗಿರುತ್ತದೆಯೋ ಆಗ ಪರದೆಯು ಪಕ್ಕಕ್ಕೆ ಸರಿಯುತ್ತದೆ. ಆದ್ದರಿಂದ ನೀವೆಲ್ಲರೂ ತಯಾರಾಗಿದ್ದೀರೋ ಅಥವಾ ಇನ್ನೂ ಯಾವುದಾದರೂ ತಯಾರಿಯನ್ನು ಮಾಡುತ್ತಿದ್ದೀರೋ? ನಿಮ್ಮ ಭಕ್ತರು ಅರ್ಧಂಬರ್ಧ ಸಾಕ್ಷಾತ್ಕಾರದಿಂದ ಸಂತುಷ್ಟರಾಗುವುದಿಲ್ಲ. ಆದ್ದರಿಂದ ನಿಮ್ಮ ಇಷ್ಟದೇವತೆಯ ರೂಪವನ್ನು ಸದಾ-ಅಲಂಕಾರ ಮಾಡಿಕೊಂಡು ಇಟ್ಟುಕೊಳ್ಳಿರಿ. ಈಗ ಏನು ಮಾಡಬೇಕೆನ್ನುವುದು ಗೊತ್ತಾಯಿತೇ.

ದೆಹಲಿಯ ನಿವಾಸಿಗಳು ತಯಾರಾಗಬೇಕು. ಏಕೆಂದರೆ ಸಂಪೂರ್ಣತೆ ಹಾಗೂ ಸಂಪನ್ನತೆಯ ಪತಾಕೆ ಹಾಗೂ ರಾಜ್ಯದ ಬಾವುಟವು ದೆಹಲಿಯಲ್ಲಿಯೇ ಹಾರಲಿದೆ. ಆದ್ದರಿಂದ ಧ್ವಜಾರೋಹಣದ ದಿನವನ್ನು ದೆಹಲಿಯ ನಿವಾಸಿಗಳು ನಿಗದಿ ಮಾಡಬೇಕು ಈಗಿನಿಂದಲೇ ಸಿದ್ಧತೆ ನಡೆಸಲು ತೊಡಗಬೇಕು. ವಿದೇಶಿಯರಂತೂ ಮೊದಲು ಕಾರ್ಯವನ್ನು ಮಾಡುವರು. ವಿದೇಶೀಯರು ವಿದೇಶದಿಂದ ಶಕ್ತಿಶಾಲಿ ಘೋಷಣೆಯಿಂದ ವಿಜಯದ ಬಾವುಟದ ಬುನಾದಿಯನ್ನು ಹಾಕುವರು. ಎಲ್ಲರೂ ವಿದೇಶದ ಭಿನ್ನ ಭಿನ್ನ ಸ್ಥಾನಗಳಿಂದ ವಿಶೇಷ ಆತ್ಮರ ಸಹಯೋಗದ ಆಧಾರದಿಂದ ವಿಜಯದ ತಳಹದಿಯು ಹಾಕಲ್ಪಡುವುದು. ಹೇಗೆ ಈಗಿನಕಾಲದ ಪ್ರಪಂಚದಲ್ಲಿಯೂ ಪ್ರತಿಯೊಂದು ಸ್ಥಾನದ ಮಣ್ಣನ್ನು ಒಂದು ಸ್ಥಳದಲ್ಲಿ ಕೂಡಿಹಾಕುವರು. ಹಾಗೆಯೇ ಪ್ರತಿಯೊಂದು ವಿದೇಶದ ಸ್ಥಾನದ ವಿಶೇಷ ವ್ಯಕ್ತಿಗಳ ಪ್ರಚಾರದ ಮೂಲಕ ಭಾರತದಲ್ಲಿ ವಿಜಯದ ಧ್ವಜದ ಸ್ಥಾಪನೆ ಮಾಡುವವರಾಗಿದ್ದಾರೆ. ಧ್ವಜಾರೋಹಣ ಮಾಡುವುದಕ್ಕೆ ಮೊದಲು ಬುನಾದಿಯನ್ನು ಹಾಕಬೇಕಲ್ಲವೇ. ಆದ್ದರಿಂದ ಪ್ರತಿಯೊಂದು ಸ್ಥಾನದಿಂದ ಜನ್ಮ ತೆಗೆದುಕೊಂಡಿರುವ ವಿಶೇಷ ಆತ್ಮರೂಪೀ ಪುಷ್ಪಗುಚ್ಛವನ್ನು ಬಾಪ್‌ದಾದಾ ಹಾಗೂ ಸರ್ವಪರಿವಾರದ ಮುಂದೆ ಮೊದಲು ವಿದೇಶವು ಕಾಣಿಕೆಯಾಗಿ ಅರ್ಪಿಸುವುದು. ಪುಷ್ಪಗುಚ್ಛವು ರಚನೆ ಆಗುತ್ತಾ ಇದೆಯಲ್ಲವೇ. ಅದರಲ್ಲಿ ಎಂತಹ ವಿಶೇಷ ಪರಿಮಳ ಎಂದರೆ ವಿಶೇಷತೆಯು ಇರಬೇಕೆಂದರೆ ಅದು ವಿದೇಶದಿಂದ ಭಾರತದವರೆಗೆ ತಲುಪುತ್ತಾ ಇರಬೇಕು. ಅಂತಹ ಸುಗಂಧಯುಕ್ತ ಆತ್ಮೀಯತೆಯುಳ್ಳ ಆತ್ಮರೂಪೀ ಗುಲಾಬಿಗಳ (ಸದಾ ಗುಲಾಬಿಗಳ) ಹೂಗುಚ್ಛವು ತಯಾರಾಗುತ್ತಾ ಇದೆಯೇ. ಹೇಗೆ ಯಾವುದಾದರೂ ಬಹಳ ಒಳ್ಳೆಯ ಮನಸ್ಸನ್ನು ಮುಗ್ಧ ಮಾಡುವ ಸುಗಂಧ ಇದ್ದರೆ ಅಕಸ್ಮಾತ್ತಾಗಿ ಯಾರಾದರೂ ಎಲ್ಲಿಂದಲಾದರೂ ಅಲ್ಲಿಗೆ ಬಂದಾಗ ಅವರಿಗೆ ಇಷ್ಟವಿಲ್ಲದಿದ್ದರೂ ಅವರಿಗೆ ಆ ಕಡೆ

ಗಮನವು ಅವಶ್ಯವಾಗಿ ಹೋಗುತ್ತದೆ. ಈ ಪರಿಮಳವು ಎಲ್ಲಿಂದ ಬರುತ್ತಿದೆ ಎಂದು ಸುತ್ತಮುತ್ತಲೂ ನೋಡುತ್ತಾರೆ. ಹಾಗೆಯೇ ಆತ್ಮಿಕ ಗುಲಾಬಿಹೂಗಳ ಸುಗಂಧವು ಯಾವಾಗ ಭಾರತದವರೆಗೆ ತಲುಪುವುದೋ ಆಗ ಎಲ್ಲರ ಗಮನವನ್ನೂ ತನ್ನ ಕಡೆ ಆಕರ್ಷಣೆ ಮಾಡುವುದು. ಈ ಸುವಾಸನೆಯು ಎಲ್ಲಿಂದ ಬಂದಿತು ಎಂದು ಎಲ್ಲರೂ ಹುಡುಕುವರು. ಈ ಸುಗಂಧದ ಕೇಂದ್ರವು ಎಲ್ಲಿದೆ ಎಂದು ಶೋಧನೆ ಮಾಡುವರು. ಒಳ್ಳೆಯದು.

**ಇಂತಹ ಸದಾ ಅಲಂಕೃತರಾಗಿರುವ ಮೂರ್ತಿಗಳು, ರಾಜ ವಂಶಿಯರು, ಇಷ್ಟ ವಂಶಿಯರು ಸರ್ವಾತ್ಮರಿಗೆ ಸದಾ ತಮ್ಮ ಶ್ರೇಷ್ಠ ಸಂಕಲ್ಪಗಳ ಮೂಲಕ ವರದಾನವನ್ನು ಕೊಡುವವರು, ದಯಾ ಹೃದಯರಾಗಿ ಸರ್ವ ಆತ್ಮರಿಗೂ ನೆಲೆಯನ್ನು ತೋರಿಸುವವರು ಇಂತಹ ಮಹಾದಾನಿ, ವರದಾನಿ ಇಷ್ಟದೇವ ಶ್ರೇಷ್ಠ ಆತ್ಮರಿಗೆ ಬಾಪ್ ದಾದಾರವರ ನೆನಪು. ಪ್ರೀತಿ ಹಾಗೂ ನಮಸ್ತೆ.**

**ದೀದಿಯವರೊಂದಿಗೆ**: ಬಾಪ್‍ದಾದಾರವರ ಒಂದು ಪ್ರಶ್ನೆ ಇದೆ. ಮಹಾರಥಿಗಳಲ್ಲಿ ಒಬ್ಬೊಬ್ಬರ ಸಂಸ್ಕಾರವು ಬ್ರಹ್ಮಾರವರ ಸಮಾನ ಹೆಚ್ಚಾಗಿದೆ ಹಾಗೂ ಒಬ್ಬೊಬ್ಬರ ಸಂಸ್ಕಾರವು ವಿಷ್ಣುವಿನ ಸಮಾನ ಆಗಿದೆ, ಒಬ್ಬೊಬ್ಬರ ಜನ್ಮ ಪತ್ರಿಕೆಯಲ್ಲಿ ಆದಿಯಿಂದ ಅಂತ್ಯದವರೆಗೆ ಸ್ಥಾಪನೆಗೆ ನಿಮಿತ್ತ ಆಗುವ ಸಂಸ್ಕಾರ ಇದೆ ಹಾಗೂ ಒಬ್ಬೊಬ್ಬರದು ಪಾಲನೆಯ ಸಂಸ್ಕಾರ ಇದೆ. ಇದರ ರಹಸ್ಯ ಏನು ಎನ್ನುವುದರ ಬಗ್ಗೆ ಆತ್ಮಿಕ ಸಂಭಾಷಣೆ ಮಾಡಿರಿ. ಇಬ್ಬರೂ ವಿಶೇಷ ಆತ್ಮರೂ ಆಗಿದ್ದಾರೆ. ಆದರೂ ಅಂತರವೂ ವಿಶೇಷವಾಗಿ ಇದೆ. ಮತ್ತೆ ಇಬ್ಬರಲ್ಲಿ ಉತ್ತಮರು ಯಾರು? ಭವಿಷ್ಯದ ಜೊತೆಯಲ್ಲಿ ಇದರ ಸಂಬಂಧ ಏನಾಗಿದೆ? ವರ್ತಮಾನ ಸಮಯಲ್ಲಿ ಇಬ್ಬರ ವಿಶೇಷ ಪಾತ್ರಗಳು ಏನಾಗಿವೆ ಹಾಗೂ ಇಬ್ಬರ ಪೂಜೆಯಲ್ಲಿಯೂ ಏನು ಅಂತರವಿದೆ ಎನ್ನುವುದರ ಬಗ್ಗೆ ಆತ್ಮಿಕ ಸಂಭಾಷಣೆ ಮಾಡಿರಿ. ಇದು ದೊಡ್ಡ ವಿಷಯ ಆಗಿದೆ ಅಲ್ಲವೇ. ಇದರ ವಿಮರ್ಶೆಯಿಂದ ನಿಮ್ಮ ಪೂಜ್ಯರೂಪದ ಬಗ್ಗೆಯೂ ಅರಿತುಕೊಳ್ಳಬಹುದು. ನನ್ನ ರೂಪವು ಯಾವುದಾಗುವುದು ಎಂದು ತಿಳಿದುಕೊಳ್ಳಬಹುದು. ಅದರ ಭಾಸನೆ ಉಂಟಾಗುವುದು. ಹೇಗೆ ಈಗ ನಿಮ್ಮನ್ನು ಯಾರಾದರೂ ನಿಮ್ಮ ಹೆಸರಿನಿಂದ ಕೂಗಿದರೆ ನನ್ನನ್ನು ಕರೆಯುತ್ತಿದ್ದಾರೆ ಎಂದು ತಕ್ಷಣ ನಿಮಗೆ ಅನುಭವ ಆಗುವುದಲ್ಲವೇ. ಅದರ ಸ್ಪಷ್ಟ ಭಾಸನೆ ಉಂಟಾಗುವುದು. ಒಳ್ಳೆಯದು.

ಇಂದು ದೆಹಲಿಯ ಸರದಿ ಆಗಿದೆ. ದೆಹಲಿಗೆ ಎಲ್ಲರೂ ಮುತ್ತಿಗೆ ಹಾಕಿರಿ. ದೆಹಲಿಯ ಭೂಮಿಗೆ ಪ್ರಣಾಮ ಮಾಡಲೇಬೇಕು. ದೆಹಲಿಯ ವಿಶೇಷ ಪಾತ್ರವು ಸ್ಥಾಪನೆಯಲ್ಲಿ ಅಡಗಿದೆ ಹಾಗೂ ಬೊಂಬಾಯಿಯ ವಿಶೇಷ ಪಾತ್ರವು ವಿನಾಶದಲ್ಲಿ ಇದೆ. ಕಲ್ಕತ್ತದ ಪಾತ್ರವೂ ಸಹ ಪ್ರಚಾರ ಮಾಡುವುದರಲ್ಲಿ ಒಳ್ಳೆಯ ಸಹಯೋಗಿ ಆಗುವುದಾಗಿದೆ. ಒಳ್ಳೆಯದು, ಈಗ ದೆಹಲಿಯವರು ಏನು ಮಾಡುವಿರಿ?

ದೆಹಲಿಯನ್ನು ಹೃದಯ ಎಂದು ಕರೆಯಲಾಗುತ್ತದೆ. ಹೃದಯದ ಬಡಿತವು ಹೇಗಿದೆ? ಬಾಪ್‍ದಾದಾರವರ ಹೃದಯ ಎಂದರೆ ಸ್ಥಾಪನೆಯ ಹೃದಯ, ಆದ್ದರಿಂದ ಸ್ಥಾಪನೆಯ ಹೃದಯದ ಸ್ಥಿತಿಯು ಏನಾಗಿದೆ? ಸ್ಥಿತಿಯು ತೀವ್ರಗತಿ ಆಗಿದೆಯೋ ಅಥವಾ ಮಂದಗತಿ ಆಗಿದೆಯೋ? ಸ್ಥಿತಿಯವರು ಯಾವಾಗ ವಿಶೇಷ ವರ್ಗದ ವಿವಿಧ ಸೇವೆಯನ್ನು ಮಾಡಿ ಹೂಗುಚ್ಛವನ್ನು ತಯಾರು ಮಾಡುವಿರೋ ಆಗ ಸ್ಥಾಪನೆಯ ಕಾರ್ಯವು ತೀವ್ರ ಗತಿಯಿಂದ ನಡೆಯುತ್ತಿದೆ ಎಂದು ಹೇಳಬಹುದು. ಇನ್ನೂ ಸಂಪರ್ಕದ ಸೂತ್ರದಿಂದ ಬಂಧಿಸಿಲ್ಲ.

ದೆಹಲಿಯ ಕಡೆಗೆ ಎಲ್ಲರ ದೃಷ್ಟಿ ಇದೆ. ತಂದೆಯ ದೃಷ್ಟಿಯು ಇರುವಂತೆ ಸರ್ವರ ದೃಷ್ಟಿಯೂ ಇದೆ. ಏಕೆಂದರೆ ಸ್ಥಾಪನೆಯ ಕೇದ್ರವೂ ಸಹ ಅಲ್ಲಿಯೇ ಇದೆ ಹಾಗೂ ರಾಜ್ಯದ ಕೇಂದ್ರವೂ ಸಹ ಅಲ್ಲಿಯೇ ಇದೆ. ಆದ್ದರಿಂದ ಎಲ್ಲರ ದೃಷ್ಟಿಯು ಬಿಂದುವಿನ ಕಡೆಗೆ ಹೋಗುತ್ತದೆ. ದೆಹಲಿಯ ಮಹಾವೀರ ಪಾಂಡವ ಸೈನ್ಯವಂತು ದೊಡ್ಡದಾಗಿದೆ. ಪಾಂಡವರು ಒಟ್ಟುಗೂಡಿ ಪ್ರತಿಯೊಂದು ತಿಂಗಳು ಯಾವುದಾದರೊಂದು ಮಹತ್ಕಾರ್ಯ ಮಾಡಿ ತೋರಿಸಬೇಕು. ಏಕೆಂದರೆ ದೆಹಲಿಯ ಸುಪುತ್ರರು ಪ್ರಸಿದ್ಧರಾಗಿದ್ದೀರಿ. ಸುಪುತ್ರರು ಎಂದರೆ ಮಹಾತ್ಕಾರ್ಯಮಾಡಿ ತೋರಿಸುವವರು. ದೆಹಲಿಯಿಂದ ಸೇವೆಯ ಪ್ರೇರಣೆಯು ದೊರೆಯಬೇಕು. ಹೇಗೆ ಕೇಂದ್ರ ಸರ್ಕಾರದ

ಮೂಲಕ ಸರ್ವ ಪ್ರಾಂತ್ಯಗಳಿಗೂ ನಿರ್ದೇಶನವು ದೊರೆಯುತ್ತದೆಯೋ ಹಾಗೆಯೇ ಸೇವೆಯ ಯೋಜನೆಗಳು ಅಥವಾ ಸೇವೆಯಲ್ಲಿ ನವೀನತೆಯನ್ನು ತರುವ ಸಲುವಾಗಿ ಪಾರ್ಲಿಮೆಂಟ್ ಕರೆಯಬೇಕು. ಈ ಪಾಂಡವ ಭವನವೇ ಪಾಂಡವರ ಸರ್ಕಾರದ ಪಾರ್ಲಿಮೆಂಟ್ ಆಗಿದೆ. ಪಾರ್ಲಿಮೆಂಟ್ ನಲ್ಲಿ ಎಲ್ಲಾ ಕಡೆಗಳಿಂದ ಬಂದಿರುವ ಎಲ್ಲಾ ಸದಸ್ಯರ ಸಲಹೆಗಳಿಂದ ಹೊಸ ಕಾನೂನು ತಯಾರಾಗುತ್ತದೆ. ದೆಹಲಿಯಿಂದ ಪ್ರತಿ ತಿಂಗಳು ವಿಶೇಷ ಯೋಜನೆಗಳು ಪ್ರಕಟ ಆಗಬೇಕು. ಆಗ ಸಮಾಪ್ತಿಯು ಸಮೀಪಿಸುವುದು ಹಾಗೂ ಇದೇ ಪಾರ್ಲಿಮೆಂಟ್ ನ ಭವನದಲ್ಲಿ ಜಯ ಜಯಕಾರ ಆಗುವುದು. ಪಾಂಡವರು ಚೆನ್ನಾಗಿ ಕೇಳಿದಿರಾ? ಶಕ್ತಿಯರಿಲ್ಲದೆ ಪಾಂಡವರು ಏನೂ ಮಾಡಲಾರಿರಿ, ಶಕ್ತಿಯರು ಪಾಂಡವರನ್ನು ಮುಂದೆ ಇಡಬೇಕು ಹಾಗೂ ಪಾಂಡವರು ಶಕ್ತಿಯರನ್ನು ಮುಂದೆ ಇಡಬೇಕು. ಆಗ ವಿಷ್ಣುಪುರಿಯ ಸ್ಥಾಪನೆ ಅವರಿಂದ ಆಗುವುದು. ವಿಷ್ಣುಪುರಿಯ ಸ್ಥಾಪನೆಯಲ್ಲಿ ಇಬ್ಬರ ಸಂಯುಕ್ತ ಪಾತ್ರ ಇದೆ ಆದ್ದರಿಂದ ಸ್ಥಾಪನೆಯ ಕಾರ್ಯದಲ್ಲಿಯೂ ಸಂಯುಕ್ತ ರೂಪದ ಕಾರ್ಯವು ನಡೆಯುವುದರಿಂದಲೇ ಸಫಲತೆಯು ಆಗುತ್ತದೆ.

ದೆಹಲಿಯಲ್ಲಿ ಯೋಜನಾಬುದ್ಧಿ ಇದೆ. ಆದರೆ ಇನ್ನೂ ಗುಪ್ತವಾಗಿದೆ. ಈಗ ಎಲ್ಲರೂ ನಿಮ್ಮ ವಿಶೇಷತಾರೂಪಿ ಬೆರಳಿನ ಸಹಯೋಗವನ್ನು ನೀಡಿರಿ. ಸರ್ವರ ವಿಶೇಷತೆಯ ಕೈಬೆರಳಿನಿಂದಲೇ ಸ್ಥಾಪನೆಯ ಕಾರ್ಯ ಸಂಪನ್ನ ಆಗುವುದು. ವಿಶೇಷತೆಯನ್ನು ಗುಪ್ತವಾಗಿ ಇಟ್ಟುಕೊಳ್ಳಬೇಡಿ. ಕಾರ್ಯದಲ್ಲಿ ತೊಡಗಿಸಿರಿ. ಆದರೆ ನಿಷ್ಕಾಮರಾಗಿ ಹೇಗೆ ಸ್ಥಾಪನೆಯಲ್ಲಿ ದೆಹಲಿಯು ಪ್ರಥಮ ಸ್ಥಾನವನ್ನು ಪಡೆದಿದೆಯೋ ಹಾಗೆಯೇ ವಿಶೇಷತೆಗಳ ಹೂಗುಚ್ಛದಲ್ಲಿಯೂ ಸಹ ಪ್ರಥಮ ಆಗಬೇಕು. ದೆಹಲಿಯಲ್ಲಿ ಎಲ್ಲಾ ಮಹಾರಥಿಗಳ ಸಹಯೋಗದ ಹಸ್ತ ಇದೆ. ಸರ್ವ ಮಹಾರಥಿಗಳ ಸಹಯೋಗದ ನೀರು ದೆಹಲಿಯ ಭೂಮಿಯಲ್ಲಿ ಬಿದ್ದಿದೆ. ದೆಹಲಿಯ ಬುನಾದಿಗೆ ಯಾವ ಮಹಾರಥಿಯೂ ಸಹಯೋಗವನ್ನು ಕೊಡದೆ ಉಳಿದಿಲ್ಲ. ಎಲ್ಲರೂ ನೀರೆರೆದಿದ್ದೀರಿ. ಈಗ ಕೇವಲ ಯೋಗದ ಬಿಸಿಲಿನ ಅವಶ್ಯಕತೆ ಇದೆ. ಆಗ ಎಷ್ಟೊಂದು ವಿಶೇಷ ಆತ್ಮರ ಪ್ರತ್ಯಕ್ಷ ಪಲವು ದೊರೆಯುತ್ತದೆ ಎನ್ನುವುದನ್ನುನೋಡಬಹುದು. ತಾವಾಗಿಯೇ ನಿಮ್ಮ ಬಳಿ ತೆಗೆದುಕೊಳ್ಳುವ ಸಲುವಾಗಿ ಬರುವರು. ದೆಹಲಿಯ ಭೂಮಿಯ ವಿಶೇಷತೆಗಳು ಬೇಕಾದಷ್ಟಿವೆ. ಮೊದಲು ಈ ಯೋಜನಾತಂಡವನ್ನು ನಿರ್ಮಿಸಿರಿ. ಅದರಲ್ಲಿ ನಾಲ್ಕೂ ಕಡೆಯ ಮಹಾರಥಿಗಳ ಹಾಗೂ ಶಕ್ತಿಯರ ಸಹಯೋಗವನ್ನು ತೆಗೆದುಕೊಳ್ಳಿರಿ. ಸೇವೆಯ ಬಗ್ಗೆ ಸಮಯ ಪ್ರತಿಸಮಯ ದೆಹಲಿಯಲ್ಲಿ ಸಂಘಟನೆಯು ಸೇರಬೇಕು. ಈ ಭೂಮಿಯಲ್ಲಿ ಮಹಾರಥಿಗಳು ಒಟ್ಟಿಗೆ ಸೇರುವ, ಸ್ಥಾಪನೆಯ ಕಾರ್ಯವನ್ನು ವೃತ್ತಿ ಹಾಗೂ ವಾತಾವರಣದಿಂದ ಸಮೀಪ ತರುವ ಕಾರ್ಯವನ್ನು ಮಾಡುತ್ತದೆ. ಹೇಗೆ ಮಧುಬನವು ಚರಿತ್ರೆಯ ಭೂಮಿ ಆಗಿದೆ. ಮಿಲನದ ಭೂಮಿ ಆಗಿದೆ ಯೋ ಹಾಗೆಯೇ ದೆಹಲಿಯ ದರಣಿಯು ಸೇವೆಗೆ ಪ್ರತ್ಯಕ್ತರೂಪವನ್ನು ಕೊಡಲು ನಿಮಿತ್ತವಾಗಿದೆ. ಆಗ ದೆಹಲಿಯಿಂದ ಪ್ರತಿಧ್ವನಿಯು ಹರಡುವುದು ಈಗ ಎಲ್ಲರ ಬುದ್ಧಿಯಲ್ಲಿ ನಾವು ಏನು ಮಾಡುತ್ತಾ ಇದ್ದೇವೆಯೋ, ಏನು ನಡೆಯುತ್ತಾ ಇದೆಯೋ ಅದರಿಂದ ಏನೂ ಆಗುವುದಿಲ್ಲ ಎನ್ನುವ ಸಂಕಲ್ಪವು ಉತ್ಪನ್ನ ಆಗಿದೆ. ಈಗ ಎಲ್ಲಾ ಆಧಾರಗಳೂ ಕಡಿದುಹೋಗಲು ತೊಡಗಿವೆ. ಆದ್ದರಿಂದ ಯುದ್ಧದ ಸಮಯದಲ್ಲಿ ಯಥಾರ್ಥ ಆಧಾರವನ್ನು ಬೇಗ ಬೇಗ ಹುಡುಕುವರು. ಬೇಡುವರು. ಇಂತಹ ಹೊಸ ವಿಚಾರವನ್ನು ಯಾರಾದರೂ ತಿಳಿಸಲಿ ಹಾಗೂ ಅಂತ್ಯದಲ್ಲಿ ನಾಲ್ಕೂ ಕಡೆ ಅಲೆದಾಡಿದ ಮೇಲೆ ತಂದೆಯ ಆಧಾರದ ಮುಂದೆ ಎಲ್ಲರೂ ತಲೆಬಾಗುವರು. ಈಗ ದೆಹಲಿಯವರು ಏನು ಮಾಡಬೇಕು ಎನ್ನುವುದು ಗೊತ್ತಾಯಿತೇ. ಒಳ್ಳೆಯದು.

ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 26-12-1978.

***ಇಷ್ಟದೇವತೆಗಳ ಚಿಹ್ನೆಗಳು.***

ತಂದೆಯು ಮಕ್ಕಳ ನಾಲ್ಕು ರೂಪಗಳ ವಂಶವನ್ನು ಎಂದರೆ ಶಿವವಂಶ, ಬ್ರಹ್ಮಾವಂಶ, ದೇವತಾವಂಶ, ಇಷ್ಟದೇವ ವಂಶವನ್ನು ನೋಡುತ್ತಿದ್ದರು. ಈಗ ಯಾರು ನಿಮಗೆ ಸೇವೆಯಲ್ಲಿ ಸಹಯೋಗಿಯಾಗಿ, ಸಮೀಪವಾಗಿ ಇರುತ್ತಾರೋ ಅವರಲ್ಲಿ ಕೆಲವರು ರಾಜವಂಶದಲ್ಲಿ, ಕೆಲವರು ಪ್ರಜೆಗಳಲ್ಲಿ, ಭವಿಷ್ಯದಲ್ಲಿ ಉನ್ನತ ಕುಟುಂಬದಲ್ಲಿ ಮತ್ತು ಪ್ರಜೆಗಳು, ಭಕ್ತಿಯಲ್ಲಿ ಇಷ್ಟವಂಶಿಯರು ಮತ್ತು

ಭಕ್ತರಾಗುತ್ತಾರೆ. ಇಷ್ಟ ದೇವತೆಯಾಗಲು ವಿಶೇಷವಾಗಿ ಎಂಟು ವಿಷಯಗಳನ್ನು ಸ್ಮೃತಿಯಲ್ಲಿಟ್ಟುಕೊಳ್ಳಬೇಕು. ಇವುಗಳೆ ಇಷ್ಟದೇವತೆಗಳ ಚಿಹ್ನೆಗಳಾಗಿವೆ. 1.ಅವರು ಸದಾ ಬೆಹದ್(ಮಿತಿಯಿಲ್ಲದ) ದಯಾ ಹೃದಯಗಳಾಗಿ ಸರ್ವಾತ್ಮರಿಗೆ ಮುಕ್ತಿ, ಜೀವನ್ ಮುಕ್ತಿಯ ದಡವನ್ನು ತೋರಿಸುತ್ತಾರೆ. 2.ಸರ್ವರ ದುಃಖಹರ್ತ, ಸುಖ ಕರ್ತಾನ ಪಾತ್ರವನ್ನು ಅಭಿನಯಿಸುತ್ತಾರೆ. 3.ಸದಾ ಸಂಕಲ್ಪ, ಮಾತು(ನುಡಿ) ಕರ್ಮದಿಂದ ಪವಿತ್ರತೆಯ ವ್ಯಕ್ತಿತ್ವ ಕಾಣಿಸುತ್ತದೆ. 4.ಸದಾ ಸ್ವಭಾವದಲ್ಲಿ, ಸಂಸ್ಕಾರದಲ್ಲಿ, ನಡವಳಿಕೆಯಲ್ಲಿ ಸರಳವಾಗಿರುತ್ತಾರೆ. ಆದರೆ ಶ್ರೇಷ್ಠವಾಗಿ ಕಾಣಿಸುತ್ತಾರೆ. 5.ಸರ್ವ ಗುಣಗಳ ಶೃಂಗಾರದಿಂದ ಸದಾ ಅಲಂಕೃತರಂತೆ ಕಾಣಿಸುತ್ತಾರೆ. ಯಾವ ಗುಣದ ಲೋಪವು ಇರುವುದಿಲ್ಲ. 6.ಅವರು ಸದಾ ಕಮಲ ಸಮಾನವಾಗಿ ಇರುತ್ತಾ ಎಲ್ಲರನ್ನೂ ಕಮಲ ಪುಷ್ಪ ಸಮಾನವಾಗಿ ಅತೀತ ಮತ್ತು ಪ್ರಿಯವಾಗಿ ಮಾಡುತ್ತಾರೆ. 7.ಅಚಲ, ಆಡೋಲವಾಗಿ ಏಕರಸ ಸ್ಥಿತಿಯಲ್ಲಿ ಇರುತ್ತಾರೆ. 8.ಸಂಕಲ್ಪ ಮತ್ತು ಮಾತಿನಲ್ಲಿ ಸರ್ವಾತ್ಮರ ಪ್ರತಿ ವರದಾನಿಯಾಗಿ ಇರುತ್ತಾರೆ. ನಿಂದಿಸುವವರು ಅಥವಾ ದೂಷಣೆ ಮಾಡುವವರಿಗೂ ವರದಾನಿಯಾಗಿ ಇರುತ್ತಾರೆ ನಿಂದೆಗೆ ಬದಲಾಗಿ ವರದಾನಿಯಾಗಿರುವುದಕ್ಕೆ ಫಲವಾಗಿ ಇಷ್ಟ ದೇವತೆಯ ರೂಪದಲ್ಲಿ ಹೂಗಳ ಮಳೆಯನ್ನು ಸುರಿಸಿಕೊಳ್ಳುತ್ತಾರೆ. ಎಂದು ಹೇಳುತ್ತಾ ಶಿವಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಶಕ್ತಿ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸರ್ವಾತ್ಮರಿಗೆ ನಿಷ್ಕಾಮ, ಬೇಹದ್ ದಯಾಹೃದಯಿಯಾಗಿ ಮುಕ್ತಿ ಅಥವಾ ಜೀವನ್ ಮುಕ್ತಿಯ ದಡವನ್ನು ತೋರಿಸಿದ್ದೇನೆ.

2. ನಾನು ಸದಾ ದುಃಖಹರ್ತ, ಸುಖಕರ್ತನ ಪಾತ್ರವನ್ನು ಅಭಿನಯಿಸಿದ್ದೇನೆ.

3. ನನ್ನ ಪ್ರತಿ ಸಂಕಲ್ಪ, ಮಾತು, ಕರ್ಮದಿಂದ ಸದಾ ಪವಿತ್ರತೆಯ ವ್ಯಕ್ತಿತ್ವ ಕಾಣಿಸಿದೆ .

4. ನಾನು ಸ್ವಭಾವದಲ್ಲಿ, ಸಂಸ್ಕಾರದಲ್ಲಿ, ನಡವಳಿಕೆಯಲ್ಲಿ ಸದಾ ಸರಳವಾಗಿರುತ್ತಲೂ ಶ್ರೇಷ್ಠವಾಗಿ ಕಾಣಿಸಿದ್ದೇನೆ.

5. ನಾನು ಸದಾ ಸರ್ವಗುಣಗಳ ಶೃಂಗಾರದಿಂದ ಅಲಂಕರಿಸಲ್ಪಟ್ಟ ಇಷ್ಟದೇವತೆ.

6. ನಾನು ಕಮಲ ಸಮಾನವಾಗಿ ಇರುತ್ತಾ ಇತರರನ್ನು ಕೂಡ ಕಮಲಪುಷ್ಪ ಸಮಾನವಾಗಿ ಅತೀತ ಮತ್ತು ಅತಿಪ್ರಿಯವಾಗಿ ತಯಾರು ಮಾಡಿದ್ದೇನೆ.

7. ನಾನು ಏಕರಸ ಸ್ಥಿತಿಯಲ್ಲಿರುವ ಚೈತನ್ಯ ಮೂರ್ತಿ.

8. ನಾನು ಸದಾ ಸಂಕಲ್ಪ ಮತ್ತು ಮಾತಿನಿಂದ ಸರ್ವಾತ್ಮರಿಗೆ ವರದಾನವನ್ನು ಕೊಡುತ್ತಾ, ನಿಂದಿಸುವವರಿಗೂ ಕೂಡ ವರದಾನವನ್ನು ಕೊಟ್ಟು ಜನ್ಮಜನ್ಮಾಂತರಗಳಿಗೆ ಭಕ್ತರನ್ನು ತಯಾರು ಮಾಡಿಕೊಂಡಿದ್ದೇನೆ.

9. ನಾನು ನನ್ನ ಇಷ್ಟದೇವತಾರೂಪವನ್ನು ಸಂಪೂರ್ಣವಾಗಿ ತಯಾರಿಸಿಕೊಂಡು ಭಕ್ತರಿಗೆ ಸಾಕ್ಷಾತ್ಕಾರ ಮಾಡಿಸಿದ್ದೇನೆ.